ದಿಃ 06-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಫಿರ್ಯಾದಿದಾರ ಪರ ಶ್ರೀ. **D.K.** ವಕೀಲರಿಂದ:

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು , ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯದಿಂದ ಕೂಡಿದ್ದು ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನನ್ನ ಮೌಖಿಕ ಹೇಳಿಕೆಯಲ್ಲಿ ನನ್ನ ಪರವಾಗಿ ಗುರುತಿಸಿಕೊಂಡ ನಿಸಿ 1 ರಿಂದ 5 ದಾಖಲೆಗಳನ್ನು ಈಗ ನನ್ನ ಪರವಾಗಿ ನಿಪಿ 1 ರಿಂದ 5 ಎಂದು ಗುರುತಿಸುಕೊಳ್ಳಲು ಕೇಳಿಕೊಳ್ಳುತ್ತೇನೆ. ಅದರಂತೆ ಈಗ ನಿಪಿ 1, 1(ಎ), 2 ರಿಂದ 5 ಎಂದು ಗುರುತಿಸಿಕೊಳ್ಳಲಾಯಿತು.

ಪಾಟೀಸವಾಲುಃ ಆರೋಪಿತರ ಪರ **ASK** ವಕೀಲರಿಂದ **:-**

ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುತ್ತದೆ ಆರೋಪಿ ನನಗೆ 3 ವರ್ಷಗಳಿಂದ ಪರಿಚಯ ಇರುತ್ತಾನೆ. ಆರೋಪಿ ಪೆಟ್ರೋಲ ಪಂಪನಲ್ಲಿ ಮ್ಯಾನೇಜರ ಅಗಿ ಕೆಲಸ ಮಾಡುತ್ತಾನೆ. ನನ್ನ ಮತ್ತು ಆರೋಪಿತನ ನಡುವೆ ಆದ ಹಣದ ವ್ಯವಹಾರದಲ್ಲಿ ಬೇರೆ ಯಾರೂ ಇರಲಿಲ್ಲ. ಆರೋಪಿತನು ತಾನು ಪಡೆದ ಹಣಕ್ಕೆ ಯಾವುದೇ ಪತ್ರ ಬರೆದುಕೊಟ್ಟಿಲ್ಲ ನಾನು ಆರೋಪಿತನಿಗೆ 12 ಲಕ್ಷ ರೂ. ನೀಡಿರುತ್ತೇನೆ. ಬ್ಯಾಂಕಿನಲ್ಲಿ ವಿದಿಸಿದ ಪರಿಮಿತಿ ಸಲುವಾಗಿ ಚೆಕನಲ್ಲಿ ಕೇವಲ 10 ಲಕ್ಷ ರೂ. ಗಳನ್ನು ನಮೂದಿಸಿರುತ್ತೇನೆ. ಈ ಮೊದಲು ನನ್ನ ಮತು ಆರೋಪಿ ನಡುವೆ ಹಣದ ವ್ಯವಹಾರ ಆಗಿದ್ದು ಆರೋಪಿ ಅದನ್ನು ಹಿಂತಿರುಗಿಸಿರುತ್ತಾನೆ. ನನ್ನ ಮತು ಆರೋಪಿ ನಡುವೆ ಹಣದ ವ್ಯವಹಾರ ಕೇವಲ ಪರಿಚಯದ ಮೇಲೆ ಆಗಿರುತ್ತದೆ. ಯಾವುದೇ ದಾಖಲೆ ಬರೆದುಕೊಂಡಿರುವುದಿಲ್ಲ. ಒಟ್ಟು ಆರೋಪಿತನು ನನ್ನಿಂದ 2 ರಿಂದ 3 ಬಾರಿ ಹಣ ಪಡೆದಿರುತ್ತಾನೆ. ನಾನು ಆರೋಪಿತನಿಗೆ ಇರುವ ಆದಾಯ ನೋಡಿಕೊಂಡೆ ನೀಡಿರುತ್ತೇನೆ. ಆರೋಪಿತನಿಗೆ ಜಮೀನು ಇರುತ್ತದೆ. ಆರೋಪಿ ತನಗೆ ಜಮೀನು ಇರುತ್ತದೆ ಎಂದು ಹೇಳಿರುತ್ತಾನೆ ನಾನು ನೋಡಿರುವುದಿಲ್ಲ. ಆರೋಪಿತನ ಹೆಸರಿನಲ್ಲಿ ಒಂದು ಸೈಟ ಇದ್ದು ಅದರ ನಂ 5-6-305 ಇರುತ್ತದೆ. ಆರೋಪಿತನು ಎರಡು ಚೆಕಗಳು ನೀಡಿರುತ್ತೇನೆ. ನಾನು ನನ್ನ ದೂರಿನಲ್ಲಿ ಎರಡು ಚೆಕ ನೀಡಿರುವ ಕುರಿತು ಬರೆದಿರುವುದಿಲ್ಲ.

ಈಗ ಸುಮಾರು 10 ವರ್ಷಗಳಿಂದ ನಾನು ರಿಯಲ ಎಸ್ಟೇಟ ವ್ಯವಹಾರ ಮಾಡುತ್ತಿದ್ದೇನೆ. ವರ್ಷಕ್ಕೆ 25 ರಿಂದ 30 ಲಕ್ಷ ಆದಾಯ ಬರುತ್ತದೆ. ನಾನು 10 ವರ್ಷಗಳಿಂದ ತೆರಿಗೆ ಸಂದಾಯ ಮಾಡಿರುವುದಿಲ್ಲ. ಆರೋಪಿತನು ನನಗೆ ಸಾಕಷ್ಟು ಬಾರಿ ಫೋನಪೇ ಮೂಲಕ ಹಣ ಸಂದಾಯ ಮಾಡಿರುತ್ತಾನೆ ಎಂದರೆ ನಾನು ಸಹ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ಮತ್ತು ನಾನು ಒಂದೇ ಕೋಣೆಯಲ್ಲಿ ವಾಸವಾಗಿದೆದವು ಎಂದರೆ ಸರಿಯಲ್ಲ. ನಾನು ಆರೋಪಿಗೆ 10 ಲಕ್ಷ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ 10 ಲಕ್ಷ ಗಳನ್ನು ಸೈಟ ಮಾರಾಟ ಮಾಡಿ ಬಂದ ಹಣದಿಂದ ಕೊಟ್ಟಿರುತ್ತೇನೆ. ಅರೊಪಿತನು ನಮ್ಮ ಮನೆಗೆ ಬಂದು ಹಣ ತೆಗೆದುಕೊಂಡು ಹೋಗಿರುತ್ತಾನೆ. ಅರೊಪಿತನು ನಮ್ಮ ಮನೆಗೆ ಬಂದು ಹಣ ತೆಗೆದುಕೊಂಡು ಹೋಗಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಪೆಟ್ರೋಲ ಪಂಪ ಎಷ್ಟು ಸಂಬಳ ಇತ್ತು ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ಪೆಟ್ರೋಲ ಪಂಪ ಎಷ್ಟು ಸಂಬಳ ಇತ್ತು ಎಂದು ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 25-07-2024 ರಂದು ಆರೋಪಿತನು ಚೆಕ ಬರೆದುಕೊಟ್ಟಿರುತ್ತಾನೆ. ಆರೋಪಿತನು ಚೆಕನ ಮುಂಭಾಗ ಮತ್ತು ಹಿಂಭಾಗದಲ್ಲಿ ಸಹಿ ಮಾಡಿರುತ್ತಾನೆ. ಆರೋಪಿತನು ಖಾಲಿ ಚೆಕ ನೀಡಿರುತ್ತಾನೆ ಎಂದರೆ ಸರಿಯಲ್ಲ. ಚೆಕನಲ್ಲಿ ಬರೆದ ಅಕ್ಷರಗಳು ಆರೋಪಿತನೆ ಬರೆದಿರುತ್ತಾನೆ. ಚೆಕನ ಮೇಲೆ ಆರೋಪಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಪೂರ್ಣ ಹೆಸರು ನಾಗಪ್ಪ ಶಿವಶರಣಪ್ಪ ನಿಂಬರಗಿ ಇರುತ್ತದೆ. ಆರೋಪಿತನು 10 ಲಕ್ಷ ಪಡೆದು ಅಷ್ಟು ಹಣ ಹಿಂದಿರುಗಿಸಲು ಶಕ್ತನಾಗಿದ್ದು ಆದ್ದರಿಂದ ಆತನಿಗೆ ನಾನು 10 ಲಕ್ಷ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಹಣ ಪಡೆಯಲು ಒಬ್ಬನೆ ಬಂದಿದ್ದ. ದಿಃ 10-04-2024 ರಂದು ಬೆಳಿಗ್ಗೆ ನಮ್ಮ ಮನೆಗೆ ಬಂದಿದ್ದನು. ಆರೋಪಿತನಿಗೆ ಹಣ ನೀಡುವ ಸಮಯದಲ್ಲಿ ಆತನ ಮನೆಯವರಿಗೆ ವಿಚಾರಿಸಿಲ್ಲ ಎಂದರೆ ಸಾಕ್ಷಿ ಆರೋಪಿ ಹೇಳಿದಂತೆ ಆತನ ಹೆಂಡತಿ ಮತ್ತು ಮಕ್ಕಳು ಮೂಕರಿದ್ದು ಅವರ ಚಿಕಿತ್ಸೆಗಾಗಿ ಹಣ ಪಡೆಯುತ್ತಿದ್ದೇನೆ ಎಂದು ತಿಳಿಸಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಆರೋಪಿತನ ಹೆಂಡತಿ ಮತ್ತು ಮಕ್ಕಳನ್ನು ನೋಡಿಲ್ಲ. ನಾನು ಆರೋಪಿಗೆ ನೋಟಿಸ ನೀಡುವ ಮೊದಲು ಸಾಕಷ್ಟು ಬಾರಿ ಭೇಟಿ ನೀಡಿ ಹಣ ಕೇಳಿರುತ್ತೇನೆ.

(ಈ ಸಮಯದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ